ಪ್ರತಿವಾದಿಗಳ ಪರ ಹಾಜರುಪಡಿಸಲಾದ ಮಧ್ಯಂತರ ಅರ್ಜಿಗಳನ್ನು ಪುರಸ್ಕರಿಸಿ, ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.

ದಿನಾಂಕ 04.07.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಎಸ್.ಎಲ್., ವಕೀಲರಿಂದಃ-

ಈರನಾಗಿ ನರಸಿಂಹಯ್ಯನಿಗೆ ಗಂಡು ಮಕ್ಕಳಿದ್ದು, ಹೆಣ್ಣು ಮಕ್ಕಳು ಇರಲಿಲ್ಲ. ಅವರ ಹೆಸರುಗಳು ನಲ್ಲನಾಗಯ್ಯ ಹಾಗೂ ನರಸಿಂಹಯ್ಯ ಅಲಿಯಾಸ್ ಕರಿಯಪ್ಪ. ನನ್ನ ತಾಯಿ ನರಸಮ್ಮ ಗೆಜ್ಜಗಾರಪಾಳ್ಯಕ್ಕೆ ಸೇರಿದವರು. ನನ್ನನ್ನು ಕನಕಪುರದಿಂದ ಆಚೆಯ ಗೊಲ್ಲರದೊಡ್ಡಿಗೆ ಕೊಟ್ಟು ಮದುವೆ ಮಾಡಿಕೊಡಲಾಗಿದೆ. ನನ್ನ ಮದುವೆಯಾಗಿ ಸುಮಾರು 50 ವರ್ಷಗಳಾಗಿವೆ. ನನ್ನ ಪ್ರಮಾಣಪತ್ರದಲ್ಲಿ ನನ್ನ ವಯಸ್ಸನ್ನು 60 ವರ್ಷ ಎಂದು ಕಾಣಿಸಲಾಗಿದೆ. ನನ್ನ ಮದುವೆಯಾದಾಗ ನನ್ನ ವಯಸ್ಸು 15 ರಿಂದ 20 ವರ್ಷಗಳಾಗಿತ್ತು. ನನ್ನ ಮದುವೆಯಾದ ನಂತರ ನಾನು ನನ್ನ ಗಂಡನ ಮನೆಯಲ್ಲಿ ಸುಮಾರು 15 ವರ್ಷಗಳಿದ್ದೆ. ಅಲ್ಲಿ ನನ್ನ ಗಂಡನ ಹೊಲ ಹಾಗೂ ಮನೆಯಿದೆ ಎನ್ನುವುದು ಸರಿಯಲ್ಲ. ನನ್ನ ಗಂಡನಿಗಿದ್ದ ಹೊಲ ಹಾಗೂ ಮನೆಯನ್ನು ಮಾರಾಟ ಮಾಡಿ ಅವರ ಅಕ್ಕಂದಿರ ಮದುವೆಗಳನ್ನು ಮಾಡಲಾಗಿರುತ್ತದೆ. ನಾನು ಗೊಲ್ಲರದೊಡ್ಡಿಗೆ ಬಂದು ಸುಮಾರು 40 ವರ್ಷಗಳಾಗಿವೆ.

2. ನನ್ನ ತಾತ ಈರನಾಗಿ ನರಸಿಂಹಯ್ಯನಿಗೆ ಸುಮಾರು 7 ಎಕರೆ ಚಿಲ್ಲರೆ ಜಮೀನು ಬಂದಿತ್ತು. ನಿಮ್ಮ ತಂದೆಯ ಭಾಗಕ್ಕೆ ಯಾವ ಸರ್ವೇ ನಂಬರ್ ಸ್ವತ್ತುಗಳು ಬಂದಿವೆ? ಎಂದರೆ ಸಾಕ್ಷಿಯು ನನ್ನ ದೊಡ್ಡಪ್ಪ ಹಾಗೂ ತಂದೆಯ ನಡುವೆ ಇದುವರೆವಿಗೂ ಭಾಗವಾಗಿಲ್ಲ ಎಂದು

ನುಡಿಯುತ್ತಾರೆ. ನಮ್ಮ ತಂದೆಯ ಭಾಗಕ್ಕೆ ಇದೇ ಜಾಗದ ಸ್ವತ್ತು ಬಂದಿದೆ ಎನ್ನುವುದು ನನಗೆ ಗೊತ್ತಿಲ್ಲ ಎನ್ನುವುದು ನಿಜ. ಗೊಲ್ಲರದೊಡ್ಡಿಯಲ್ಲಿ ನನ್ನ ದೊಡ್ಡಪ್ಪನ ಮಗ ನರಸಿಂಹಯ್ಯ ಒಂದು ಮನೆಯಲ್ಲಿದ್ದಾನೆ ಎನ್ನುವುದು ನಿಜ. ನನ್ನ ದೊಡ್ಡಪ್ಪನ ಎರಡನೇ ಮಗ ನರಸಪ್ಪ ಮತ್ತೊಂದು ಮನೆಯಲ್ಲಿದ್ದಾನೆ ಎನ್ನುವುದು ನಿಜ. ಅದೇ ರೀತಿ ಈರಪ್ಪ ಹಾಗೂ ಕೆಂಚಪ್ಪ ಬೇರೆ ಬೇರೆ ಮನೆಗಳಲ್ಲಿದ್ದಾರೆ ಎನ್ನುವುದು ನಿಜ. ಪ್ರತಿವಾದಿಗಳು ಎಷ್ಟು ವಿಸ್ತೀರ್ಣದ ಮನೆಯಲ್ಲಿ ವಾಸವಾಗಿದ್ದಾರೆ ಎನ್ನುವುದನ್ನು ಹೇಳಲು ನನಗೆ ಗೊತ್ತಿಲ್ಲ.

3. 1ನೇ ಪ್ರತಿವಾದಿಗೆ ಒಂದು ಮನೆ ಇರುತ್ತದೆ. ಅದು ಸೀಮೆ ಹೆಂಚಿನ ಮನೆಯಾಗಿದ್ದು ಮುಂದೆ ತಾರಸಿ ಮನೆಯಾಗಿರುತ್ತದೆ. ನಮ್ಮೂರು ಲಕ್ಷ್ಮೀಪುರ ಗ್ರಾಮ ಪಂಚಾಯಿತಿಗೆ ಸೇರುತ್ತದೆ ಎನ್ನುವುದು ನಿಜ. ಈಗ 1ನೇ ಪ್ರತಿವಾದಿ ವಾಸವಾಗಿರುವ ಮನೆಗೆ ಆಕೆಯ ಹೆಸರಿನಲ್ಲಿ ಖಾತೆಯಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಮನೆ ನನ್ನ ತಾತ ಹಾಗೂ ಅಜ್ಜಿಯದ್ದು ಎಂದು ನುಡಿಯುತ್ತಾರೆ. ವಾದಪತ್ರದಲ್ಲಿ ನಮಗೆ ನಮ್ಮ ತಾತ ಹಾಗೂ ಅಜ್ಜಿಯ ಕಡೆಯಿಂದ ಮನೆ ಬಂದಿದೆ ಎನ್ನುವುದನ್ನು ಬರೆಸಿಲ್ಲ. ಆ ರೀತಿ ಬರೆಸಲು ನಿಮಗೆ ತೊಂದರೆ ಇರಲಿಲ್ಲ? ಎಂದರೆ ಸಾಕ್ಷಿಯು ನನಗೆ ಓದು ಬರಹ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ವಾಸವಿರುವ ಮನೆಯ ದಾಖಲೆಯನ್ನು ನಾನು ನೋಡಿಲ್ಲ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎನ್ನುವುದು ಸರಿಯಲ್ಲ.

4. ಸರ್ವೇ ನಂ.99ನ್ನು ಹೊರತುಪಡಿಸಿ ನಿಮ್ಮ ತಂದೆ

ನರಸಿಂಹಯ್ಯನಿಗೆ ಬೇರೆ ಯಾವುದೇ ಸ್ವತ್ತು ಬಂದಿಲ್ಲ? ಎಂದರೆ ಸಾಕ್ಷಿಯು ಬಂದಿದೆ, ಸರ್ವೇ ನಂ.145 ಹಾಗೂ ಸರ್ವೇ ನಂ.146 ನಮ್ಮ ತಾಯಿಗೆ ಸೇರಿದ್ದು 6 ಎಕರೆ ಚಿಲ್ಲರೆ ವಿಸ್ತೀರ್ಣ ಇರುತ್ತದೆ ಎಂದು ನುಡಿಯುತ್ತಾರೆ. ನನಗೆ ಸದರಿ ಸ್ವತ್ತಿನ ಚಕ್ಕುಬಂದಿ ಹೇಳಲು ಗೊತ್ತಿಲ್ಲ. ಸದರಿ ಸ್ವತ್ತಿನ ಚಕ್ಕುಬಂದಿ ದೃಢೀಕರಣ ಪತ್ರವನ್ನು ನಾನು ಪಡೆದುಕೊಂಡಿಲ್ಲ. ಸದರಿ ದಾಖಲೆಯನ್ನು ಪಡೆದುಕೊಳ್ಳಲು ನಿಮಗೆ ತೊಂದರೆ ಇರಲಿಲ್ಲ? ಎಂದರೆ ಸಾಕ್ಷಿಯು ನಾನು ಓದಿಲ್ಲ, ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ವಾದಪತ್ರದ ಅನುಸೂಚಿಯಲ್ಲಿನ ಚಕ್ಕುಬಂದಿಯನ್ನು ನಾನೇ ಹೇಳಿ ಬರೆಸಿದ್ದು ಈಗ ಅದರ ಬಗ್ಗೆ ನನಗೆ ನೆನಪಿಲ್ಲ.

5. ನನ್ನ ತಾಯಿ ನರಸಮ್ಮನಿಗೆ ಬಂದಂತಹ ಸ್ವತ್ತುಗಳು ಎಂದು ಹೇಳುವ ಸಂಬಂಧ ನಾನು ದಾಖಲೆ ಹಾಜರುಪಡಿಸಿಲ್ಲ. ಈ ದಾವೆಯನ್ನು ದಾಖಲಿಸುವ ಕಾಲಕ್ಕೆ ದಾವಾ ಸ್ವತ್ತುಗಳ ಖಾತೆ ನನ್ನ ತಮ್ಮ ನರಸಿಂಹಯ್ಯನ ಹೆಸರಿನಲ್ಲಿತ್ತು. ಸರ್ವೇ ನಂ.99 ರ ಖಾತೆ ನನ್ನ ತಮ್ಮನ ಹೆಸರಿನಲ್ಲಿತ್ತು. ಅದೇ ರೀತಿ ಸರ್ವೇ ನಂ.145 ಹಾಗೂ ಸರ್ವೇ ನಂ.146 ರ ಖಾತೆ ನಮ್ಮ ತಾಯಿಯ ಹೆಸರಿನಲ್ಲಿತ್ತು. ಸರ್ವೇ ನಂ.99 ರ 7 ಎಕರೆ 5 ಗುಂಟೆ ಪೈಕಿ ಹೈ ಜಮೀನು 6 ಎಕರೆ 39 ಗುಂಟೆ ಈ ದಿನಕ್ಕೂ ಸಹ ನಲ್ಲನಾಗಯ್ಯ ಬಿನ್ ಈರನಾಗಿ ನರಸಿಂಹಯ್ಯನ ಹೆಸರಿಗೆ ಇದೆ ಎನ್ನುವುದು ನಿಜ. ಸರ್ವೇ ನಂ.145 ಹಾಗೂ ಸರ್ವೇ ನಂ.146 ನನ್ನ ತಾಯಿಯ ಹೆಸರಿಗೆ ಬಂದಿದೆ ಎಂದು ಹೇಳುವ ಸಂಬಂಧ ದಾಖಲೆ ಹಾಜರುಪಡಿಸಿಲ್ಲ.

6. ನಾವು ಈ ದಾವೆಯನ್ನು ದಾಖಲಿಸುವ ಪೂರ್ವದಲ್ಲಿಯೇ ದಾವಾ ಅನುಸೂಚಿ 2ನೇ ಸ್ವತ್ತಿನ ಖಾತೆ 1ನೇ ಪ್ರತಿವಾದಿಯ ಹೆಸರಿಗೆ ದಾಖಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ನಿಪಿ-3ರ ಪ್ರಕಾರ ಸದರಿ ಸ್ವತ್ತಿನ ಆಧಾರದ ಮೇರೆಗೆ 1ನೇ ಪ್ರತಿವಾದಿ ಲಕ್ಷ್ಮೀಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ 70 ಸಾವಿರ ಹಾಗೂ 2 ಲಕ್ಷ ರೂಗಳ ಸಾಲ ಪಡೆದುಕೊಂಡಿದ್ದಾರೆ ಎನ್ನುವುದು ನಿಜ. ಈ ವಿಚಾರ ನಮಗೆ ಗೊತ್ತಿತ್ತು ಎನ್ನುವುದು ನಿಜ. 1ನೇ ಪ್ರತಿವಾದಿ ಸದರಿ ಸ್ವತ್ತಿನ ಆಧಾರದ ಮೇರೆಗೆ ಸಾಲ ಪಡೆದುಕೊಂಡಿದ್ದಾರೆ ಎನ್ನುವುದನ್ನು ವಾದಪತ್ರದಲ್ಲಿ ಹೇಳಿಲ್ಲ. ದಾವಾ ಅನುಸೂಚಿ 2 ಹಾಗೂ 3ನೇ ಸ್ವತ್ತುಗಳಿಗೆ ಸಂಬಂಧಿಸಿದಂತೆ 1ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗುವ ಪೂರ್ವದಲ್ಲಿ ಸದರಿ ಸ್ವತ್ತುಗಳ ಖಾತೆ ನನ್ನ ತಮ್ಮ ನರಸಿಂಹಯ್ಯನ ಹೆಸರಿನಲ್ಲಿದ್ದವು ಎನ್ನುವುದು ನಿಜ.

7. ನನ್ನ ತಂದೆ ಕರಿಯಪ್ಪ ಉರುಫ್ ನರಸಿಂಹಯ್ಯ ಪೌತಿಯಾಗಿ ಸುಮಾರು 60 ವರ್ಷಗಳಾಗಿವೆ. ನಮ್ಮ ತಾಯಿ ನರಸಮ್ಮ ಪೌತಿಯಾಗಿ 3 ವರ್ಷಗಳಾಗಿವೆ. ನಮ್ಮ ತಾಯಿಯ ಮರಣ ಪ್ರಮಾಣಪತ್ರವನ್ನು ಹಾಜರುಪಡಿಸಲಾಗಿದೆಯೇ ಎನ್ನುವುದು ನನಗೆ ಗೊತ್ತಿಲ್ಲ. ವಾದಪತ್ರದಲ್ಲಿ ನಮ್ಮ ತಾಯಿ ಪೌತಿಯಾಗಿ ಎಷ್ಟು ವರ್ಷಗಳಾಗಿವೆ ಎನ್ನುವುದನ್ನು ಹೇಳಲಾಗಿದೆ. ಈ ವಿಚಾರವನ್ನು ವಾದಪತ್ರದಲ್ಲಿ ಬರೆಸಿಲ್ಲ ಎನ್ನುವುದು ಸರಿಯಲ್ಲ. ನಮ್ಮ ತಾಯಿ ಪೌತಿಯಾದ ಒಂದು ವರ್ಷದ ನಂತರದಲ್ಲಿ ನನ್ನ ತಮ್ಮ ನರಸಿಂಹಯ್ಯ ಪೌತಿಯಾಗಿರುತ್ತಾನೆ. ನನ್ನ ತಮ್ಮ ಬದುಕಿದ್ದಾಗ ದಾವಾ ಅನುಸೂಚಿ 2 ಹಾಗೂ 3ನೇ ಸ್ವತ್ತಿನ ಖಾತೆಗಳು ಅವನ ಹೆಸರಿಗೆ ದಾಖಲಾಗಿವೆ ಎನ್ನುವ ಬಗ್ಗೆ ಅದನ್ನು ಎಲ್ಲಿಯೂ ನಾವು ಪ್ರಶ್ನಿಸಿಲ್ಲ. ನನ್ನ ತಮ್ಮ ನರಸಿಂಹಯ್ಯ ಹಾಗೂ ಆತನ ಕುಟುಂಬದವರು ಬೇರೆಯೇ

ವಾಸವಾಗಿದ್ದರು ಎನ್ನುವುದು ನಿಜ. ನನ್ನ ತಮ್ಮನ ಕುಟುಂಬದವರೇ ವ್ಯವಸಾಯ ಮಾಡುತ್ತಿದ್ದಾರೆ ಎನ್ನುವುದು ನಿಜ. ಪ್ರತಿವಾದಿಗಳು ನಮಗೆ ಬೆಳೆಯಲ್ಲಿ ಯಾವುದೇ ಭಾಗ ಕೊಟ್ಟಿಲ್ಲ ಎನ್ನುವುದು ನಿಜ.

ಪ್ರಶ್ನೆಃ- ಪ್ರತಿವಾದಿಗಳು ಬೆಳೆದ ಬೆಳೆಯಲ್ಲಿ ಭಾಗ ಬೇಕೆಂದು ನೀವು ಅವರನ್ನು ಕೇಳಿದ್ದೀರಾ?

ಉತ್ತರಃ ಈ ಪ್ರಶ್ನೆಯು ಈ ದಾವೆಯಲ್ಲಿನ ವಿವಾದಾಂಶಗಳಿಗೆ ಸಂಬಂಧಿಸಿದಂತೆ ಅಸಮಂಜಸವೆಂದು ಪರಿಗಣಿಸಿ ಪ್ರಶ್ನೆಯನ್ನು ನಿರಾಕರಿಸಲಾಯಿತು.

ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರ ಮನವಿಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

ಮರು ವಿಚಾರಣೆ ಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.